ಕೆಲಸವಾಗಬಹುದು ಅಥವಾ ಯಾಂತ್ರಿಕ ಕೆಲಸ ಆಗಬಹುದು. ಹಿಂದೆಲ್ಲ ಗ್ರಾಮಗಳಲ್ಲಿ ಬಡತನ ತಾಂಡವವಾಡುತ್ತಿತ್ತು. ಮನೆಯಲ್ಲಿ ಉಡಲು ಒಂದೇ ಜೊತೆ ಸೀರೆ, ಒಂದೇ ಜತೆ ದೋತ್ರಗಳು, ಹರಿದು ಹೋಗುವವರೆಗೆ ಬಳಸಲ್ಪಡುವಂಥವುಗಳು. ಮಕ್ಕಳಿಗೆ ಒಂದೇ ಜೊತೆ ಬಟ್ಟೆ. ಬಹಳಷ್ಟು ಕುಟುಂಬಗಳಲ್ಲಿ ಇದೇ ಪರಿಸ್ಥಿತಿ ಇರುತ್ತಿತ್ತು, ಸೀರೆ ದೋತ್ರ ಹರಿದರೆ, ಮಕ್ಕಳ ಬಟ್ಟೆಗಳಿಗೆ ತೂತು ಬಿದ್ದರೆ ಕೈಯಲ್ಲಿ ಹೊಲಿದು ಜೋಡಿಸಿಕೊಂಡು, ಅವು ಪೂರ್ಣ ಹರಿಯುವವರೆಗೆ ಉಡಲು ಉಪಯೋಗಿಸುತ್ತಿದ್ದರು ಸೀರೆ, ದೋತ್ರದ ಮಧ್ಯೆ ತೂತು ಬಿದ್ದರೆ ಅಷ್ಟು ಭಾಗವನ್ನು ಕತ್ತರಿಸಿ ಹೊಲಿದು ಮತ್ತೆ ಒಂದುಗೂಡಿಸಿಕೊಂಡು ಉಡುತ್ತಿದ್ದರು. ಅದಕ್ಕೆ ದಿಂಡು ಹಾಕುವುದು ಎನ್ನುತ್ತಿದ್ದರು. ಹೀಗೆ ಸೀರೆ, ದೋತ್ರಗಳು ಜೀರ್ಣಾವಸ್ಥೆಗೆ ಬರುವವರೆಗೆ ಬಳಸಲ್ಪಡುತ್ತಿದ್ದವು. ಬಡತನದ ಮಾನ ಮುಚ್ಚಲು ಆಗೆಲ್ಲ ಸೂಜಿದಾರಗಳೇ ಧಾರಾಳವಾಗಿ ಬಳಕೆಯಾಗುತ್ತಿದ್ದವು. ಗಾಂಧೀಜಿ ಪೂರ್ಣ ಬಟ್ಟೆ ಧರಿಸುವುದನ್ನು ವರ್ಜಿಸಿದುದರ ಹಿಂದಿನ ಘಟನೆ ತಮಗೆ ನೆನಪಿರಲು ಸಾಕು.

ಪಾಂಡವರು ವನವಾಸ ಮುಗಿಸಿ ಬಂದಮೇಲೆ ಅವರಿಗೆ ರಾಜ್ಯದಲ್ಲಿ ನ್ಯಾಯಯುತ ಪಾಲನ್ನು ಕೊಡಲು ನಿರಾಕರಿಸಿದ ಕಾರಣವಾಗಿ ಮಹಾಭಾರತ ಯುದ್ಧ ನಡೆಯುವಂತಾಯಿತು. ಪಾಂಡವರು ಕೌರವರ ಮಧ್ಯೆ ಸಂಧಾನಕ್ಕೆ ಹೋದ ಕೃಷ್ಣ, ದುರ್ಯೋಧನನಿಗೆ ಪಾಂಡವರಿಗೆ ಐದು ಹಳ್ಳಿಗಳನ್ನಾದರೂ ಕೊಡು ಎಂದು ಕೇಳಲಾಗಿ ಆತ ಪಾಂಡವರಿಗೆ ಒಂದು ಸೂಜಿ ಮೊನೆಯಷ್ಟು ಪ್ರದೇಶವನ್ನು ಕೂಡ ಕೊಡುವುದಿಲ್ಲ ಎಂದು ಅಹಂಕಾರದಿಂದ ನುಡಿದು, ಯುದ್ಧವನ್ನು ಆಹ್ವಾನಿಸಿ ಕುರುಕುಲದ ನಾಶಕ್ಕೆ ಕಾರಣನಾದ. ಇತ್ತೀಚೆಗೆ ನಮ್ಮ ಕೇಂದ್ರದ ಗೃಹಮಂತ್ರಿ ಸಹ ಚೀನಾಕ್ಕೆ ನಮ್ಮ ದೇಶದ ಒಂದು ಸೂಜಿಮೊನೆಯಷ್ಟು ಜಾಗವನ್ನು ಅತಿಕ್ರಮಿಸಲು ಬಿಡೆವು ಎಂದು ಗುಡುಗಿದ್ದು ತಮಗೆ ಗೊತ್ತಿರಬಹುದು. ಹೀಗೆ ಸೂಜಿಮೊನೆ ಸಾಂಕೇತಿಕವಾಗಿ ಪೌರುಷದ ಪ್ರತೀಕವಾಗಿಯೂ ಬಳಸಲ್ಪಡುತ್ತಾ ಬಂದಿದೆ.

ಈ ಸಂದರ್ಭದಲ್ಲಿ ಒಂದು ಪೌರಾಣಿಕ ಪ್ರಸಂಗ ನೆನಪಾಗುತ್ತದೆ. ಒಮ್ಮೆ ನಾರದರು ಲೋಕ ಸಂಚಾರ ಮಾಡುತ್ತಾ ಕೃಷ್ಣನ ಮೇಲಿದ್ದ ದುರ್ಯೋಧನನ ಭಕ್ತಿ, ವಿಶ್ವಾಸವನ್ನು ಪರೀಕ್ಷಿಸುವುದಕ್ಕಾಗಿ ಆತನ ಸಭೆಗೆ

